**PW_2**

## 1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಚಿತ್ರದುರ್ಗ

ಸಿ.ಸಿ.**1649/2022**

| | | |
|---|---|---|
| ಸಾಕ್ಷಿದಾರರ ಹೆಸರು | ರುದ್ರಮ್ಮ | PW:2 |
| ಗಂಡನ ಹೆಸರು | ಗುಡ್ಡರಾಜು | CW:4 |
| ವಯಸ್ಸು | 62 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | ಗೃಹಿಣಿ | ದಿನಾಂಕ : 07/12/2024 |
| ವಾಸ | ಜೋಗಿಮಟ್ಟಿ, ಚಿತ್ರದುರ್ಗ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

ಆರೋಪಿತರು ತಮ್ಮ ಹಾಗೂ ತಮ್ಮನ ಹೆಂಡತಿ ಆಗಬೇಕು. ಚಾಸಾ.1 ಮತ್ತು 5 ನನ್ನ ಸಹೋದರಿಯರು. ಚಾಸಾ.6 ಮತ್ತು 7 ಸಂಬಂದಿಕರು. ಜೋಗಿಮಟ್ಟಿ ರೋಡ್ , 4 ನೇ ಕ್ರಾಸ್ ನಲ್ಲಿ ಆರೋಪಿತರು ನನ್ನೊಂದಿಗೆ ಗಲಾಟೆ ಮಾಡಿರುತ್ತಾರೆ. 15.04.2022 ರಂದು ಗಲಾಟೆ ಆಗಿರುತ್ತದೆ. ನಮ್ಮ ಮನೆಯ ಹತ್ತಿರ ಮನೆಗೆ ಸಂಬಂದಿಸಿದಂತೆ ಏನಾದರೂ ರಿಪೇರಿ ಮಾಡಲು ಹೋದಾಗ ಆರೋಪಿತರು ನಮ್ಮ ಜೊತೆ ಗಲಾಟೆ ಮಾಡುತಿದ್ದರು. ತುಂಬಾ ವರ್ಷದಿಂದ ಗಲಾಟೆ ಮಾಡುತಿದ್ದರು. ನಮ್ಮ ಮನೆಯ ಮುಂದೆ ಆರೋಪಿತರು ಬೈಕನ್ನು ನಿಲ್ಲಿಸಿದ್ದರು. ನಾನು ಕಸ ಗುಡಿಸುವಾಗ ಬೈಕನ್ನು ಸ್ವಲ್ಪ ಮುಂದಕ್ಕೆ ಜರುಗಿಸಿ ಅಂತ ಹೇಳಿದ್ದಕ್ಕೆ ಆರೋಪಿತರು ನನ್ನ ಮನೆ ಒಳಗೆ ನುಗ್ಗಿ ಸುಜಾತ, ರವಿಕುಮಾರ ಮತ್ತು ಅವರ ಮಗ ಕೂಡ ನನಗೆ ಹೊಡೆದಿರುತ್ತಾರೆ. ಪೊಲೀಸರಿಗೆ ದೂರು ನೀಡಿರುತ್ತೇನೆ ನಂತರದಲ್ಲಿ ನನ್ನ ಅಕ್ಕಂದಿರು ಬಂದು ಗಲಾಟೆಯನ್ನು ಬಿಡಿಸಿಕೊಂಡಿರುತ್ತಾರೆ ನಂತರ ನನ್ನನ್ನು ಆಸ್ಪತ್ರೆಗೆ ಸೇರಿಸಿರುತ್ತಾರೆ. ಕೆಟ್ಟ ಕೆಟ್ಟ ಮಾತುಗಳಿಂದ ನನಗೆ ಬೈದಾಡುತ್ತಾರೆ. ನನ್ನ ತಂಗಿಗೆ ಹೊಡೆಯುತಿದ್ದಾಗ ನಾನು ಬಿಡಿಸಿಕೊಳ್ಳಲು ಹೋದಾಗ ನನ್ನನ್ನು ಹಿಡಿದುಕೊಂಡು ಎಳೆದಾಡಿ ನನಗೂ ಸಹ ಹೊಡೆದಿರುತ್ತಾರೆ. ಆಗ ಆರೋಪಿತರು ನನಗೂ ಹಾಗೂ ಅಕ್ಕ ಹಾಗೂ ತಂಗಿಯರ ವಿರುದ್ದ

**PW_2**

ಅವಾಚ ಶಬ್ದಗಳಿಂದ ನುಡಿದಿರುತ್ತಾರೆ . ನಂತರ ನಾನು ನನ್ನ ತಂಗಿ ಆಸ್ಪತ್ರೆಗೆ ಹೋಗಿರುತ್ತೇವೆ. ಪ್ರತಿಸಾರಿ ಮನೆ ಬಿಟ್ಟು ಹೋಗಿ ಅಂತ ನಮ್ಮ ಜೊತೆ ಗಲಾಟೆ ಮಾಡಿರುತ್ತಾರೆ. ನಂತರದಲ್ಲಿ ಆಸ್ಪತ್ರೆಯಲ್ಲಿ ನನ್ನ ತಂಗಿಯು ಪೊಲೀಸರ ಬಳಿ ಹೇಳಿಕೆಯನ್ನು ನೀಡಿರುತ್ತಾಳೆ . ಈ ವಿಷಯದಲ್ಲಿ ನಾನು ಕೂಡ ಪೊಲೀಸರ ಬಳಿ ಹೇಳಿಕೆಯನ್ನು ನೀಡಿರುತ್ತೇನೆ.

**( ಈ ಹಂತದಲ್ಲಿ ಸ.ಸ. ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸ.ಸ. ಅಭಿಯೋಜಕರಿಂದ**

ಆರೋಪಿತರು ನನ್ನ ತಂಗಿಯ ಕೈಹಿಡಿದು ದರನೆ ಎಳೆದು ಕೆಳಗೆ ಬೀಳಿಸಿದರು. ನಂತರ ನನ್ನ ತಂಗಿಯು ತೊಟ್ಟಿರುವ ನೈಟಿಯನ್ನು ಹಿಡಿದು ಎಳೆದಾಡಿ ಅವಳ ತಲೆಕೂದಲನ್ನು ಹಿಡಿದು ಎಳೆದಾಡಿ ಕೈಗಳಿಂದ ಅವಳ ಎದೆಗೆ ತಲೆಗೆ ಕೆನ್ನೆಗೆ ಕಿವಿಗೆ ಹೊಡೆದಿರುತ್ತಾರೆ ಎಂದರೆ ಸರಿ. ನಂತರ ನಾನು ನನ್ನ ತಂಗಿಗೆ ಹೊಡೆಯುವುದನ್ನು ಬಿಡಿಸಲು ಬಂದಾಗ 2 ನೇ ಆರೋಪಿ ಕೈಯನ್ನು ಹಿಡಿದು ನನ್ನ ಕೈಯನ್ನು ಹಿಡಿದು ಎಳೆದು ಹಾಕಿರುತ್ತಾರೆ. 1 ನೇ ಆರೋಪಿ ಮತ್ತು ಅವರ ಮಗ ಕೂದಲು ಹಿಡಿದುಕೊಂಡು ಎಳೆದಾಡಿ ಕೈಗಳಿಂದ ಎದೆಗೆ ಕಾಲಿಗೆ ಮತ್ತು ಮೈಕೈಗೆ ಗುದ್ದಿರುತ್ತಾರೆ. ಆ ಸಮಯದಲ್ಲಿ ನನ್ನ ಇನ್ನೊಬ್ಬ ಅಕ್ಕ ಗಲಾಟೆ ಬಿಡಿಸಲು ಬಂದಾಗ ಅವರಿಗೂ ಸಹ ಆರೋಪಿತರು ನಿಮ್ಮನ್ನು ಸಾಯಿಸಿಬಿಡುತ್ತೇವೆ ಅಂತ ಪ್ರಾಣ ಬೆದರಿಕೆ ಹಾಕಿದರು. ನಾನು ನನ್ನ ತಂಗಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆಯನ್ನು ಪಡೆದೆವು ಎಂದರೆ ಸರಿ.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಯಾವುದೇ ಸಕಾರಣ ಹೇಳಿರುವುದಿಲ್ಲ ಆದ್ದರಿಂದ ಪಾಟೀಸವಾಲು ಇಲ್ಲ ಅಂತ ಪರಿಗಣಿಸಲಾಯಿತು.**

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**

**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**